**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಪಪೂಶಿ/ಶೈಶಾ-04/ತ.ಕು 03/2016-17 ದಿನಾಂಕ: 20-09-2016.

ಜ್ಞಾಪನ

ವಿಷಯ: 2016-17ನೇ ಸಾಲಿಗೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮ ಕೈಗೊಳ್ಳುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 04 ಯೋಯೋಕ 2016, ಬೆಂಗಳೂರು, ದಿನಾಂಕ: 10-05-2016.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯು 2016-17ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಧ್ಯಂತರ ರಜಾ ದಿನಗಳಲ್ಲಿ (ದಿನಾಂಕ: 08-10-2016ರಿಂದ 23-10-2016ರವರೆಗೆ) ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಗೊಳ್ಳಲಾಗಿದೆ.

ರಾಷ್ಟ್ರೀಯ ಪಠ್ಯಕ್ರಮವನ್ನು ಅಳವಡಿಸಿಕೊಂಡಿರುವ ಹಿನ್ನೆಲೆಯಲ್ಲಿ ರಾಜ್ಯದ ದ್ವಿತೀಯ ವಾರ್ಷಿಕ ಪರೀಕ್ಷೆಗಳಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಉನ್ನತ ಶಿಕ್ಷಣಕ್ಕಾಗಿ ನಡೆಸುವ ಪ್ರವೇಶ ಪರೀಕ್ಷೆಗಳಲ್ಲಿ ನಮ್ಮ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಸಾಧನೆ ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ಆದ್ದರಿಂದ ಸದರಿ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಧೈರ್ಯವಾಗಿ ಎದುರಿಸಿ ಉತ್ತಮ ಫಲಿತಾಂಶ ಪಡೆಯುವ ದೃಷ್ಟಿಯಿಂದ ಈ ತರಬೇತಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸುವುದು ಅವಶ್ಯಕವಾಗಿದೆ. ಇದರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಫಲಿತಾಂಶ ಸುಧಾರಣೆಯಾಗಿ ರಾಜ್ಯದ ಒಟ್ಟಾರೆ ಫಲಿತಾಂಶದಲ್ಲಿ ಹೆಚ್ಚಳ ಕಾಣಬಹುದಾಗಿದೆ.

ಮಧ್ಯಂತರ ರಜೆಯಲ್ಲಿ ಹಮ್ಮಿಕೊಳ್ಳುತ್ತಿರುವ ತರಬೇತಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಈ ಪತ್ರದೊಂದಿಗೆ ಲಗತ್ತಿಸಲಾದ ವಿಷಯವಾರು ತಾತ್ಕಾಲಿಕ ವೇಳಾಪಟ್ಟಿಯಂತೆ ನಡೆಸಲಾಗುವುದು.

**ವಿಶೇಷ ತರಬೇತಿ ಕಾರ್ಯಕ್ರಮದ ರೂಪರೇಶೆಗಳು ಹಾಗೂ ಜಿಲ್ಲಾ ಉಪನಿರ್ದೇಶಕರುಗಳ ಜವಾಬ್ದಾರಿಗಳು-**

- ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಒಂದು ನೋಡಲ್ ಕಾಲೇಜನ್ನು ಗುರುತಿಸಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು.
- ಸದರಿ ತರಬೇತಿ ಕಾರ್ಯಕ್ರಮದಲ್ಲಿ ಆಯಾ ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಾರೆ.
- ಮೊದಲ ಹಂತದಲ್ಲಿ 1. ಇಂಗ್ಲೀಷ್ 2. ಅರ್ಥಶಾಸ್ತ್ರ 3. ಲೆಕ್ಕಶಾಸ್ತ್ರ 4. ಭೌತಶಾಸ್ತ್ರ 5. ರಸಾಯನ ಶಾಸ್ತ್ರ 6. ಗಣಿತ ಮತ್ತು 7. ಜೀವಶಾಸ್ತ್ರ ವಿಷಯಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು.
- ಈ ತರಬೇತಿ ಕಾರ್ಯಕ್ರಮದ ಉಸ್ತುವಾರಿಯನ್ನು ಜಿಲ್ಲಾ ಉಪನಿರ್ದೇಶಕರವರೊಂದಿಗೆ ಆಯಾ ಜಿಲ್ಲೆಗಳ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ನೋಡಿಕೊಳ್ಳುವುದರೊಂದಿಗೆ ಸರ್ಕಾರದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.
- ತಾಲ್ಲೂಕು ಮಟ್ಟದ ವಿಶೇಷ ತರಬೇತಿಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು.

| ದಿನಾಂಕ | ತರಬೇತಿ ವಿಷಯಗಳು | ತರಬೇತಿ ಸ್ಥಳ | ತರಬೇತಿ ಆಯೋಜನೆ |
|---|---|---|---|
| 8-10-2016 ರಿಂದ 23-10-2016 (ದಿನಾಂಕ: 10-10-2016,11-10-2016, 12-10-2016 ಮತ್ತು 15-10-2016 ಹಬ್ಬದ ರಜೆಗಳನ್ನು ಹೊರತುಪಡಿಸಿ) | 1. ಇಂಗ್ಲೀಷ್ 2. ಅರ್ಥಶಾಸ್ತ್ರ 3. ಲೆಕ್ಕಾಶಾಸ್ತ್ರ 4. ಭೌತಶಾಸ್ತ್ರ 5. ರಸಾಯನ ಶಾಸ್ತ್ರ 6. ಗಣಿತ 7. ಜೀವಶಾಸ್ತ್ರ | ಆಯಾ ತಾಲ್ಲೂಕು ಕೇಂದ್ರದ ನೋಡಲ್ ಕಾಲೇಜು (ಜಿಲ್ಲಾ ಉಪನಿರ್ದೇಶಕರು ಗುರುತಿಸುವುದು). | ತಾಲ್ಲೂಕು ಸಂಯೋಜಕರು (ಜಿಲ್ಲಾ ಉಪನಿರ್ದೇಶಕರು ರವರು ಪ್ರಾಚಾರ್ಯರ/ಹಿರಿಯ ಉಪನ್ಯಾಸಕರನ್ನು ಗುರುತಿಸುವುದು) |

- ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಮೇಲೆ ತಿಳಿಸಿರುವ ವೇಳಾಪಟ್ಟಿಯಂತೆ ಪ್ರತಿ ತಾಲ್ಲೂಕಿನ ನೋಡಲ್ ಕಾಲೇಜಿಗೆ ಒಬ್ಬ ಸೂಕ್ತ ಹಿರಿಯ ಪ್ರಾಚಾರ್ಯರು/ಉಪನ್ಯಾಸಕರನ್ನು ಸಂಯೋಜನಾ ಅಧಿಕಾರಿಯನ್ನಾಗಿ ಗುರುತಿಸಿ ನೇಮಿಸುವುದು.
- ರಾಜ್ಯದ ಎಲ್ಲಾ ಜಿಲ್ಲಾಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು ಆಯಾ ತಾಲ್ಲೂಕುಗಳ ಕೇಂದ್ರಗಳಲ್ಲಿ ನಡೆಯುವ ತರಬೇತಿ ಕಾರ್ಯಕ್ರಮದಲ್ಲಿ ತಮ್ಮ ಕಾಲೇಜಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ಕ್ರಮ ವಹಿಸುವುದು.
- ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು, ತಾಲ್ಲೂಕು ಸಂಯೋಜಕರು ತಮ್ಮ ತಾಲ್ಲೂಕಿನ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಖ್ಯೆಯನ್ನು ವಿಭಾಗವಾರು (ಕಲಾ. ವಾಣಿಜ್ಯ ಮತ್ತು ವಿಜ್ಞಾನ) ಪಡೆದು ಪ್ರತಿ ತರಗತಿಯಲ್ಲಿ 40 ವಿದ್ಯಾರ್ಥಿಗಳಂತೆ ತರಗತಿಗಳ ಸಂಖ್ಯೆಯನ್ನು ಲೆಕ್ಕ ಹಾಕಿ ಪತ್ರದೊಂದಿಗೆ ಲಗತ್ತಿಸಿರುವ ವೇಳಾಪಟ್ಟಿಯಂತೆ 12 ದಿನಗಳಿಗೆ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವಂತೆ ನೋಡಿಕೊಳ್ಳುವುದು. ಸದರಿ ಮಾಹಿತಿಯನ್ನು ಪಡೆದು ಜಿಲ್ಲಾ ಕ್ರೋಢೀಕೃತ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಪ್ರತಿ ವಿಷಯದಲ್ಲಿ ಕನಿಷ್ಠ 15 ವಿದ್ಯಾರ್ಥಿಗಳು ಇರತಕ್ಕದ್ದು, ಒಂದು ವೇಳೆ 15ಕ್ಕಿಂತ ಕಡಿಮೆ ಇದ್ದಲ್ಲಿ ಆ ವಿದ್ಯಾರ್ಥಿಗಳನ್ನು ಸಂಬಂಧಿಸಿದ ವಿಷಯಕ್ಕೆ ಸಮಿಪದ ತಾಲ್ಲೂಕಿಗೆ ಟ್ಯಾಗ್ ಆನ್ ಮಾಡತಕ್ಕದ್ದು.
- ಪ್ರತಿ ತರಗತಿಗೆ 40ವಿದ್ಯಾರ್ಥಿಗಳನ್ನು ನಿಗಧಿಪಡಿಸಲಾಗಿದ್ದು, ಆದರೆ ಅನಿವಾರ್ಯ ಸಂಧರ್ಭಗಳಲ್ಲಿ ಒಂದೇ ತರಗತಿಗೆ ವಿದ್ಯಾರ್ಥಿಗಳು ಇದ್ದರೆ, ಕನಿಷ್ಠ 15ರಿಂದ 55 ವಿದ್ಯಾರ್ಥಿಗಳನ್ನಾಗಿ ಮಾಡಿಕೊಳ್ಳುವುದು.
- ತಾಲ್ಲೂಕು ಸಂಯೋಜಕರ ಜವಾಬ್ದಾರಿ ಬಹಳ ಮಹತ್ವದ್ದಾಗಿದ್ದು, ಸದರಿ ವಿಶೇಷ ತರಬೇತಿ ಕಾರ್ಯಕ್ರಮದ ಯಶಸ್ಸಿನ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.
- ಜಿಲ್ಲಾ ಉಪನಿರ್ದೇಶಕರು ಈ ಕುರಿತು ಯೋಜನೆಯನ್ನು ಸಿದ್ಧಪಡಿಸಿ ತಮ್ಮ ಜಿಲ್ಲೆಯಲ್ಲಿನ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮುಂಚಿತವಾಗಿ ತಿಳಿಸಿ ತಮ್ಮ ವ್ಯಾಪ್ತಿಗೆ ಒಳಪಡುವ ನೋಡಲ್ ಕಾಲೇಜಿಗೆ ತಮ್ಮ ವಿದ್ಯಾರ್ಥಿಗಳನ್ನು ನಿಯೋಜಿಸಿ ತರಬೇತಿ ಕಾರ್ಯಕ್ರಮದ ಯಶಸ್ಸುಗೊಳಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.
- ತಾಲ್ಲೂಕು ಸಂಯೋಜಕರು ಪ್ರತಿ ದಿನ 90 ನಿಮಿಷಗಳ ನಾಲ್ಕು ತರಗತಿಗಳಂತೆ ಒಟ್ಟು 07 ವಿಷಯಗಳಿಗೆ 12ದಿನಗಳಿಗೆ ತಮ್ಮ ನೋಡಲ್ ಕಾಲೇಜಿನ ತರಬೇತಿ ಕೇಂದ್ರದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು.
- ಪ್ರತಿ ದಿನ ಬೆಳಗ್ಗೆ 10.00 ಗಂಟೆಯಿಂದ ಸಂಜೆ 04.30ರವರೆಗ ತರಬೇತಿ ತರಗತಿಗಳು ನಡೆಯುವುದರಿಂದ ಹಾಜರಾತಿ ಪಡೆಯುವ ಕಾರಣ ಪ್ರತಿ ದಿನ 1/2 ಗಂಟೆ ಮುಂಚಿತವಾಗಿ ವಿದ್ಯಾರ್ಥಿಗಳು ಹಾಜರಾಗುವಂತೆ ನೋಡಿಕೊಳ್ಳುವುದು.

- ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋ ಮೇಟ್ರಿಕ್ ಯಂತ್ರದ ಮೂಲಕ ಪಡೆಯುವ ಬಗ್ಗೆ, ಸಂಬಂಧಿಸಿದಂತೆ ಪ್ರತಿ ತಾಲ್ಲೂಕು ತರಬೇತಿ ಕೇಂದ್ರದಲ್ಲಿ ಬಯೋ ಮೇಟ್ರಿಕ್ ಯಂತ್ರಗಳನ್ನು ಅಳವಡಿಸುವುದು. ದಿನಾಂಕ: 08-10-2016ರಂದು ಬೆಳಗ್ಗೆ 9.00ಗಂಟೆಯಿಂದ ಮಧ್ಯಾಹ್ನ 12.00 ರವರೆಗೆ ವಿದ್ಯಾರ್ಥಿಗಳ ನೋಂದಣಿಯನ್ನು ಹೊರಗೊತ್ತಿಗೆ ಸಂಸ್ಥೆಯಿಂದ ನಡೆಸಲಾಗುವುದು. ಸಂಬಂಧಿಸಿದಂತೆ ನೋಂದಣಿ ಅರ್ಜಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಅದರಂತೆ ವಿದ್ಯಾರ್ಥಿಯ ಫೋಟೊ (ವೆಬ್ ಕ್ಯಾಮ್) ಹಾಗೂ ಬಯೋ ಮೇಟ್ರಿಕ್ ಡಾಟಾ ಎಂಟ್ರಿ ಮಾಡಿ ಡಾಟಾ ಬೇಸ್ ಕ್ರಿಯೇಟ್ ಮಾಡಲು ಕ್ರಮಕೈಗೊಳ್ಳುವುದು.
- ಪ್ರತಿ ದಿನ ವಿದ್ಯಾರ್ಥಿಗಳ ಬಯೋ ಮೇಟ್ರಿಕ್ ಹಾಜರಾತಿಯನ್ನು ನೋಡಲ್ ಅಧಿಕಾರಿಗಳು ನೋಡಲ್ ಕೇಂದ್ರದಿಂದ ನೇರವಾಗಿ ಮಾನ್ಯ ನಿರ್ದೇಶಕರಿಗೆ ಅದೇ ದಿನ ಇ-ಮೇಲ್ ಮುಖಾಂತರ ಸಲ್ಲಿಸುವುದು.

  Email address: commissioner.pue@gmail.com.
- ಪ್ರತಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಸದರಿ ತರಬೇತಿ ಕಾರ್ಯಕ್ರಮದ ಉಪಯುಕ್ತದೆ ಹಾಗೂ ಸಮಗ್ರ ಮಾಹಿತಿಯನ್ನು ನೀಡಿ ಪೋಷಕರು ವಿದ್ಯಾರ್ಥಿಯನ್ನು ತರಗತಿಗೆ ಹಾಜರಾಗುವಂತೆ ಪ್ರೇರೆಪಿಸುವುದು. ಒಂದು ವೇಳೆ ಯಾವುದೇ ಕಾಲೇಜಿನಿಂದ ಅಲ್ಲಿನ ಒಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಲ್ಲಿ 75% ಕ್ಕಿಂತ ಕಡಿಮೆ ಹಾಜರಾದರೆ ಸದರಿ ಕಾಲೇಜಿನ ಪ್ರಾಚಾರ್ಯರನ್ನೇ ಹೊಣೆಗಾರರಾನ್ನಾಗಿ ಮಾಡಲಾಗುವುದು.
- ತಾಲ್ಲೂಕು ಸಂಯೋಜಕರು ಹಾಗೂ ಸಹ ಸಂಯೋಜಕರು ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಮಾರ್ಗದರ್ಶನದಲ್ಲಿ ಪ್ರತಿ ವಿಷಯದಲ್ಲಿ ಅನುಭವಿ ಹಿರಿಯ ಉಪನ್ಯಾಸಕ/ವಿಷಯ ತಜ್ಞರನ್ನು ಸರ್ಕಾರಿ ಅಥವಾ ಖಾಸಗಿ ಕಾಲೇಜುಗಳಿಂದ ಗುರುತಿಸಿ ತರಬೇತಿ ನೀಡಲು ನಿಯೋಜಿಸಿಕೊಂಡು ಯಶಸ್ವಿಗೊಳಿಸುವುದು.
- ಅವಶ್ಯವಿದ್ದರೆ ತಾಲ್ಲೂಕು ಸಂಯೋಜಕರು ಪ್ರತಿ ವಿಷಯಕ್ಕೂ ಒಬ್ಬ ಉತ್ತಮ ಸಂಪನ್ಮೂಲ ವ್ಯಕ್ತಿಯನ್ನು ಬದಲಿ ಸಹ ಸಂಯೋಜಕರನ್ನಾಗಿ ನೇಮಿಸಿಕೊಳ್ಳಬಹುದು.
- ವೇಳಾಪಟ್ಟಿಯಂತೆ ನಿಯೋಜಿಸಿಕೊಂಡಿರುವ ಉಪನ್ಯಾಸಕರು, ತರಬೇತಿಗೆ ಹಾಜರಾಗುವಂತೆ ನೋಡಿಕೊಳ್ಳುವುದು. ಅನಿವಾರ್ಯ ಕಾರಣಗಳಿಂದ ಯಾವುದೇ ತರಗತಿಗೆ ನಿಯೋಜನೆಗೊಂಡ ಉಪನ್ಯಾಸಕರು ಬರುವುದು ತಡವಾದರೇ ಬದಲಿ ಸಂಯೋಜಕರು ತರಗತಿಯನ್ನು ನಡೆಸುವುದು. ಯಾವುದೇ ಕಾರಣಕ್ಕೂ ಯಾವುದೇ ತರಗತಿ ಖಾಲಿ ಇರದಂತೆ ನೋಡಿಕೊಳ್ಳುವುದು.
- ಬೇರೆ ಬೇರೆ ಊರುಗಳಿಂದ ತರಬೇತಿಗೆ ಬರುವ ವಿದ್ಯಾರ್ಥಿಗಳು ನಿಗಧಿತ ವೇಳಾಪಟ್ಟಿಯಂತೆ ತರಗತಿಗಳಿಗೆ ಹಾಜರಾಗಿ ಸಂಜೆ ತಮ್ಮ ತಮ್ಮ ಮನೆಗೆ ಹೋಗುವ ವರೆಗೆ ನೋಡಿಕೊಳ್ಳುವುದರೊಂದಿಗೆ ಯಾವುದೇ ವಿದ್ಯಾರ್ಥಿಗಳಿಗೆ ತೊಂದರೆ ಯಾಗದಂತೆ, ಸಂಯೋಜಕರು ನೋಡಿಕೊಳ್ಳುವುದು.
- ತರಬೇತಿ ನೀಡುವ ವಿಷಯಗಳಲ್ಲಿನ ಕಠಿಣ ಅಧ್ಯಾಯಗಳನ್ನು ಹಾಗೂ ವಾರ್ಷಿಕ ಪರೀಕ್ಷೆಗೆ ಪೂರಕವಾಗುವಂತೆ ಉಪಯುಕ್ತ ಪ್ರಶ್ನೆ ಪತ್ರಿಕೆಗಳನ್ನು ಉತ್ತರಿಸುವುದರ ಮೂಲಕ ತರಬೇತಿ ನೀಡುವುದು. (ಸಂಬಂಧಿಸಿದಂತೆ ಅಗತ್ಯವೆನಿಸಿದರೆ ವಿಷಯವಾರು ತಜ್ಞರಿಂದ ತರಬೇತಿಗೆ ಅಗತ್ಯವಿರುವ ಪಠ್ಯವಸ್ತುವನ್ನು ಸಿದ್ಧಪಡಿಸಿ ನೀಡಲಾಗುವುದು).
- ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಕೊನೆಯ ದಿನಾಂಕದಂದು ಒಂದು ಕಿರು ಪರೀಕ್ಷೆಯನ್ನು ವಿಷಯವಾರು ನಡೆಸಿ ಫಲಿತಾಂಶದ ಬಗ್ಗೆ ವರದಿಯನ್ನು ಮಾನ್ಯ ನಿರ್ದೇಶಕರಿಗೆ ದಿನಾಂಕ: 30-10-2016ರೊಳಗೆ ನೀಡತಕ್ಕದ್ದು. ತರಬೇತಿ ಕಾರ್ಯಕ್ರಮದ ವರದಿಯನ್ನು ಪರಿಶೀಲಿಸಿ ಮುಂದಿನ ಸೂಕ್ತ ಕ್ರಮಕೈಗೊಳ್ಳಲಾಗುವುದು.
- ಪ್ರತಿ ತಾಲ್ಲೂಕು ಕೇಂದ್ರದ ನೋಡಲ್ ಕಾಲೇಜಿಗೆ ಸಾದಿಲ್ವಾರ ವೆಚ್ಚಕ್ಕಾಗಿ ಅನುದಾನ ಬಿಡುಗಡೆಗೊಳಿಸಲಾಗುವುದು.

- ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂಯೋಜಕರಿಗೆ ಹಾಗೂ ಉಪನ್ಯಾಸಕ/ವಿಷಯ ತಜ್ಞರುಗಳಿಗೆ ಸೂಕ್ತ ಸಂಭಾವನೆ ನೀಡಲಾಗುವುದು.
- **ಸದರಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ದ್ವಿತೀಯ ಪಿಯುಸಿ ಅಂತಿಮ ಫಲಿತಾಂಶದಲ್ಲಿ ಜಿಲ್ಲೆಗೆ ಗರಿಷ್ಠ ಅಂಕ ಪಡೆದ ವಿಷಯವಾರು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕರವಾಗಿ ಸೂಕ್ತ ಬಹುಮಾನ ನೀಡಲಾಗುವುದು.**

21/9/16

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

# TENTATIVE TIME TABLE

TALUK WISE SPECIAL COACHING FOR SC/ST STUDENTS STUDIYING IN GOVERNMENT PU COLLEGES

| DAYS | I SESSION (10 TO 11.30) | II SESSION (11.30 TO 1.00) | III SESSION (1.30 TO 3.00) | IV SESSION (3.00 TO 4.30) |
|---|---|---|---|---|
| 08/10 | PHY/ACC | ECO/MATH | ENG | CHEM |
| 09/10 | MATHS/ACC | ENG | ECO/CHEM | BIO |
| 13/10 | PHY/ACC | ECO/ MATHS | ENG | CHEM |
| 14/10 | MATHS/ACC | ENG | ECO/PHY | BIO |
| 16/10 | CHEM/ACC | ECO/MATHS | ENG | PHY |
| 17/10 | MATHS/ ACC | ENG | ECO/PHY | CHEM |
| 18/10 | CEM/ACC | ECO/PHY | ENG | BIO |
| 19/10 | MATHS /ACC | ENG | ECO/CHEM | BIO |
| 20/10 | PHY/ACC | ECO/MATHS | ENG | CHEM |
| 21/10 | MATHS/ ACC | ENG | ECO/CHEM | PHY |
| 22/10 | CHEM/ACC | ECO /PHY | ENG | BIO |
| 23/10 | MATHS/ ACC | ENG | ECO/PHY | |

**ABSTRACT**: **(TOTAL NO. OF SESSIONS)**

| | | | |
|---|---|---|---|
| PHY | 10 | ACC | 12 |
| CHEM | 10 | ECO | 12 |
| MATHS | 10 | ENG | 12 |
| BIO | 05 | | |